**3 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 699/2019</u>**

**ದಿನಾಂಕಃ 26.07.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ರಘು | ಚಾಸಾ-5, ಪ್ರಾಸ.-4 |
| ತಂದೆಯ  ಹೆಸರು ಃ | ಚಂದ್ರಪ್ಪ | |
| ವಯಸ್ಸು ಃ | 48 ವರ್ಷ | |
| ಉದ್ಯೋಗ ಃ | ಕೂಲಿ | |
| ವಾಸ ಃ | ಹಿರೇನಲ್ಲೂರು | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಆರೋಪಿತರು ಗೊತ್ತು.  ಚಾಸಾ-1 ರಿಂದ 4 ಮತ್ತು 6 ಗೊತ್ತು ಅವರು ನಮ್ಮ ಊರಿನವರು.  ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.  ಆರೋಪಿತರು ಮತ್ತು ಚಾಸಾ-1 ಮತ್ತು 2 ರವರ ನಡುವೆ ಆದ ಗಲಾಟೆ ವಿಚಾರ ಗೊತ್ತಿಲ್ಲ.  ಆರೋಪಿತರು ಚಾಸಾ-2 ರವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿರುವ ವಿಚಾರ ಮತ್ತು ಕೊಲೆ ಬೆದರಿಕೆ ಹಾಕಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ  ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು  ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>

ದಿಃ 21.06.2017 ರಂದು  ಸಂಜೆ 5.30 ಗಂಟೆ ಸಮಯದಲ್ಲಿ ಸ್ವರ್ಣಾಂಭ ವೈನ್ಸ ಶಾಪ್ ಹತ್ತಿರ ಇರುವಾಗ ಚಾಸಾ-2, 1 ಮತ್ತು 2 ನೇ ಆರೋಪಿತರು ಇದ್ದರು.  ಸ್ವಲ್ಪ ಸಮಯದ ನಂತರ ತಿಮ್ಮಣ್ಣನ ಹೋಟೆಲ್ ಹೋಟೆಲ್ ಹಿಂಭಾಗದಿಂದ ಜೋರಾಗಿ ಕೂಗಾಡುವ ಶಬ್ದ ಕೇಳಿಸಿತು ಎಂದರೆ ಸರಿಯಲ್ಲ. ನಾನು ಹೋಗಿ ನೋಡಿದಾಗ ಆರೋಪಿತರು ಚಾಸಾ-2 ರವರಿಗೆ ಅವ್ಯಾಚ್ಯವಾಗಿ ಬೈಯುತ್ತಿದ್ದರು ಎಂದರೆ ಸರಿಯಲ್ಲ.  ಅವರು ಕುಡಿದು ಬೈಯುತ್ತಿರಬಹುದು ಎಂದು ತಿಳಿದು ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿ.  ಜಗಳ ಜಾಸ್ತಿಯಾಗಿದ್ದು ಜಗಳ ಬಿಡಿಸಲು ಹೋಗುವಷ್ಟರಲ್ಲಿ 1 ನೇ ಆರೋಪಿ ಏಕಾಏಕಿ ತನ್ನ ಕೈಯಕಲ್ಲಿದ್ದ ಇಟ್ಟಿಗೆಯಿಂದ ಚಾಸಾ-1 ರವರ ತಲೆಗೆಯ ಹಿಂಭಾಗಕ್ಕೆ ಹೊಡೆದನು ಎಂದರೆ ಸರಿಯಲ್ಲ. 2 ನೇ ಆರೋಪಿ ಅಲ್ಲೇ ಬಿದ್ದಿದ್ದ ಬಾಟಲಿಯಿಂದ ಹೊಡೆಯಲು ಹೋಗಿರುತ್ತಾರೆ ಎಂದರೆ ಸರಿಯಲ್ಲ.  ಆಗ ಅವರು ತನ್ನ ಎಡಕ್ಕೆ ಅಡ್ಡ ಹಿಡಿದಿದ್ದು ಅವರ ಎಡಗೈ ಮುಂಗೈಗೆ ಹೊಡೆದರು ಎಂದರೆ ಸರಿಯಲ್ಲ.  ನಂತರ ಅದೇ ಬಾಟಲಿಯಿಂದ ಚಾಸಾ-2 ರವರ ಎದೆಗೆ, ಬೆನ್ನಿಗೆ ತಿವಿದು ರಕ್ತಗಾಯಗೊಳಿಸಿದರು ಎಂದರೆ ಸರಿಯಲ್ಲ.  ಆರೋಪಿತರು ಇಟ್ಟಿಗೆ ಮತ್ತು ಬಾಟಲನ್ನು ಅಲ್ಲೇ ಬಿಸಾಡಿ ಚಾಸಾ-2 ರವರಿಗೆ ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.  ಅಷ್ಟರಲ್ಲಿ ಅಲ್ಲೇ ಇದ್ದ

ಚಾಸಾ-3 ರವರು ಜಗಳವನ್ನು ನೋಡಿ ಚಾಸಾ-2 ರವರ ಸಂಬಂಧಿ ಚಾಸಾ-1 ಮತ್ತು 7, 8 ರವರಿಗೆ ವಿಚಾರ ತಿಳಿಸಿ ಆಸ್ಪತ್ರೆಗೆ ಕರೆದುಕೊಂಡು ಹೋಗುವುದಾಗಿ ತಿಳಿಸಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿತರು ಮತ್ತು ಚಾಸಾ-2 ರವರ ನಡುವೆ ಹಣಕಾಸಿನ ವಿಚಾರವಾಗಿ ಜಗಳವಾಗಿರುತ್ತದೆ ಎಂದು ನನಗೆ ತಿಳಿಯಿತು ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಸಂಬಂಧ ನಾನು ದಿಃ 24.06.2017 ರಂದು ಪೋಲಿಸರ ಮುಂದೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಲ್ಲಗಳೆದ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.